# ಅಲ್ಪಸಂಖ್ಯಾತರ ನಿರ್ದೇಶನಾಲಯ

ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯವು ಮತೀಯ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ 1999–2000ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದೆ. ಅಲ್ಪಸಂಖ್ಯಾತರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗೆ ಹಾಗೂ ಇವರ ಸಂಸ್ಕೃತಿ, ಸಾಹಿತ್ಯವನ್ನು ರಕ್ಷಿಸುವ ಮತ್ತು ಸೌಹಾರ್ದತೆಯನ್ನು ಬೆಳೆಸುವ ಉದ್ದೇಶವನ್ನು ಹೊಂದಿದೆ.

**ಶ್ರೀ ಮಹಿಬೂಬ ಸಾಬ,** ಕೆ.ಜಿ.ಎಸ್.ಎಸ್. ಇವರು ಅಲ್ಪಸಂಖ್ಯಾತರ ನಿರ್ದೇಶನಾಲಯದ ನಿರ್ದೇಶಕರಾಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದು ಇವರಿಗೆ ಸಹಕರಿಸಲು ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲು ಒಬ್ಬರು ಜಂಟಿ ನಿರ್ದೇಶಕರು, ಒಬ್ಬರು ಉಪ ನಿರ್ದೇಶಕರು ಮತ್ತು ಮೂರು ಸಹಾಯಕ ನಿರ್ದೇಶಕರೊಡನೆ ಹಾಗೂ ಇತರೆ ಕಛೇರಿ ಸಿಬ್ಬಂದಿಗಳು ಒಟ್ಟುಗೂಡಿ, ಒಟ್ಟು 63 ಅಧಿಕಾರಿ/ಸಿಬ್ಬಂದಿ ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ರಾಜ್ಯದ 30 ಜಿಲ್ಲೆಗಳಲ್ಲಿ ಆಯಾಯ ಜಿಲ್ಲೆಯ ಜಿಲ್ಲಾ ಅಧಿಕಾರಿಗಳ ನೇತೃತ್ವದಲ್ಲಿ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿಗಳು ಕಾರ್ಯನಿರ್ವಹಿಸುತ್ತಿವೆ. ಈ ಕಛೇರಿಗಳಲ್ಲಿ ಕರ್ನಾಟಕ ಸರ್ಕಾರ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯದಿಂದ ಹಮ್ಮಿಕೊಂಡಿರುವ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಕಾರ್ಯವನ್ನು ನಿರ್ವಹಿಸುತ್ತಿದೆ. ಪ್ರತಿ ಜಿಲ್ಲೆಯ ಜಿಲ್ಲಾ ಅಲ್ಪಸಂಖ್ಯಾತರ ಕಛೇರಿಗಳಲ್ಲಿ 6 ರಿಂದ 13 ಜನ ಅಧಿಕಾರಿ/ಸಿಬ್ಬಂದಿಗಳ ಮಂಜೂರಾತಿ ನೀಡಲಾಗಿದೆ.

2011ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ ಇರುವ ಮತೀಯ ಅಲ್ಪಸಂಖ್ಯಾತರ ಜನ ಸಂಖ್ಯೆ ವಿವರ ಈ ಕೆಳಕಂಡಂತಿದೆ. ಕರ್ನಾಟಕದಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಸಿಖ್, ಜೈನ್, ಬೌದ್ಧ ಮತ್ತು ಪಾರ್ಸಿ ಸಮುದಾಯಗಳನ್ನು ಮತೀಯ ಅಲ್ಪಸಂಖ್ಯಾತರ ಸಮುದಾಯಗಳೆಂದು ಪರಿಗಣಿಸಲಾಗಿದೆ.

| ಸಮುದಾಯ | ಅಲ್ಪಸಂಖ್ಯಾತರ ಜನ ಸಂಖ್ಯೆ (ಲಕ್ಷಗಳಲ್ಲಿ) | ಒಟ್ಟು ಜನಸಂಖ್ಯೆ ಶೇಕಡವಾರು ಪ್ರಮಾಣ | ಅಲ್ಪಸಂಖ್ಯಾತರಲ್ಲಿ ಶೇಕಡ ಪ್ರಮಾಣ ಜನ ಸಂಖ್ಯೆ |
|---|---|---|---|
| ಮುಸ್ಲಿಂ | 78.94 | 12.91 | 82.25 |
| ಕ್ರಿಶ್ಚಿಯನ್ | 11.43 | 1.87 | 11.92 |
| ಜೈನರು | 4.40 | 0.72 | 4.60 |
| ಸಿಖ್‌ರು | 0.28 | 0.05 | 0.24 |
| ಬೌದ್ಧರು | 0.95 | 0.72 | 0.98 |
| ಪಾರ್ಸಿ | 0.011 | 0.0 | 0.01 |
| **ಒಟ್ಟು** | **96.01** | **16.28** | **100** |

ಮತೀಯ ಅಲ್ಪಸಂಖ್ಯಾತರ ಜನ ಸಂಖ್ಯೆಯು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ 16.28ರಷ್ಟು ಇರುತ್ತದೆ. ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಡಿ–225 ಬಿಸಿಎ–2000 ದಿನಾಂಕ:30.03.2002ರಲ್ಲಿ ಈ ಕೆಳಕಂಡ ಮತೀಯ ಅಲ್ಪಸಂಖ್ಯಾತರನ್ನು ವಿವಿಧ ಹಿಂದುಳಿದ ಗುಂಪುಗಳಲ್ಲಿ ವರ್ಗೀಕರಿಸಿ ಸಂವಿಧಾನದ ಅನುಚ್ಛೇಧ 15 (4) ಮತ್ತು 16(4)ರಡಿ ಅಲ್ಪಸಂಖ್ಯಾತರ ಅಭ್ಯರ್ಥಿಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಸೌಲಭ್ಯವನ್ನು ಒದಗಿಸಲಾಗಿದೆ.

| ವರ್ಗ | ಶೇಕಡವಾರು ಮೀಸಲಾತಿ 15(4) ಮತ್ತು 16 (4) | ಅಲ್ಪಸಂಖ್ಯಾತರ ಜಾತಿ/ಉಪಜಾತಿಗಳು |
|---|---|---|
| ಪ್ರವರ್ಗ–1 | 4% | ನದಾಫ್, ಪಿಂಜಾರ, ಕಸಾಬ, ನಾಲ್ಬಂದ್, ಚಪ್ಪರ್‌ಬಂದ್, ದರ್ವೇಸು, ಪೂಲಮಾಲಿ, ಕಸಾಯಿ, ಅಟಾರಿ, ಶಿಕ್ಕಾಲಿಗಾರ, ಶಿಕಾಲ್ಲಗರ್, ಸಿಕ್ಕಾಲಿಗರ್, ಸಾಲಬಂದ, ಟಿಕನಕರ, ಬಾಜಿಗರ, ಜೊಹರಿ, ಪಿಂಜಾರಿ, ಲದಾಫ್ ಪರಿಶಿಷ್ಟ ಜಾತಿಯಿಂದ ಮತಾಂತರ ಹೊಂದಿದ ಕ್ರಿಶ್ಚಿಯನ್, (ಇತರೆ ಜಾತಿಗಳೊಂದಿಗೆ) |
| ಪ್ರವರ್ಗ–2ಎ | 15% | ಬೌದ್ಧರು (ಇತರೆ ಜಾತಿಗಳೊಂದಿಗೆ) |
| ಪ್ರವರ್ಗ–2ಬಿ | 4% | ಮುಸ್ಲಿಂ |
| ಪ್ರವರ್ಗ–3ಬಿ | 5% | ಜೈನರು (ದಿಗಂಬರ್), ಕ್ರಿಶ್ಚಿಯನ್ (ಇತರೆ ಜಾತಿಗಳೊಂದಿಗೆ) |